ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 4, September-October 2023, Pp. 140-144
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಇಟ್ಟಿಗೆ ಭಟ್ಟಿಯಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕರ ಸ್ಥಿತಿಗತಿಗಳು

**ಲೋಕೇಶ ಟಿ.ಬಿ**
ಸಂಶೋಧನಾ ವಿದ್ಯಾರ್ಥಿ, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

***Abstract:***
*ದುಡಿಮೆ ಮತ್ತು ಆರ್ಥಿಕತೆ ಪುರುಷ ಪ್ರಪಂಚವಾಗಿ ರೂಪುಗೊಂಡಿದೆ. ಅಸಂಘಟಿತವಲಯಕ್ಕೆ ಸೇರುವ ಕಟ್ಟಡ ನಿರ್ಮಾಣ ಕಾರ್ಯದಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕರ ಶ್ರಮವನ್ನು ಕಟ್ಟಡ ನಿರ್ಮಾಣ ಕ್ಷೇತ್ರವು ಕಡಿಮೆ ಕೂಲಿಗೆ ಖರೀದಿಸುತ್ತಿದೆ. ಪುರುಷ ಪ್ರಾಬಲ್ಯವಿರುವ ಕಟ್ಟಡ ನಿರ್ಮಾಣ ಕೈಗಾರಿಕೆಯಲ್ಲಿ ಲಿಂಗ ತಾರತಮ್ಯ, ವೇತನ ತಾರತಮ್ಯ ಮತ್ತು ಮಹಿಳೆಯರ ದುರ್ಬಳಕೆಯಂಥ ಸಮಸ್ಯೆಗಳನ್ನು ಮಹಿಳೆಯರು ಎದುರಿಸುತ್ತಿದ್ದಾರೆ. ಪ್ರಸ್ತುತ ಲೇಖನದಲ್ಲಿ ಇಟ್ಟಿಗೆ ಭಟ್ಟಿಯಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕರ ಸ್ಥಿತಿಗತಿಗಳನ್ನು ಕುರಿತು ಚರ್ಚಿಸಲಾಗಿದೆ.*

***Keywords:*** *ಮಹಿಳಾ ಕಾರ್ಮಿಕರು, ಇಟ್ಟಿಗೆ ಭಟ್ಟಿ, ಮಹಿಳಾ ಸಮಸ್ಯೆಗಳು, ಲಿಂಗ ತಾರತಮ್ಯ.*

## ಪೀಠಿಕೆ

ದುಡಿಮೆಯು ಬದುಕಿನ ಅವಿಭಾಜ್ಯ ಅಂಗವಾಗಿದೆ. ಪ್ರತಿಯೊಬ್ಬರು ಕೂಡ ತಮ್ಮ ಜೀವನ ನಿರ್ವಹಣೆಗೆ ಒಂದಲ್ಲ ಒಂದು ರೀತಿಯ ಉದ್ಯೋಗವನ್ನು ಅವಲಂಬಿಸಿರುತ್ತಾರೆ. ಅದೇ ರೀತಿ ದುಡಿಯದೇ ಇರುವ ಮಹಿಳೆ ಪ್ರಾಯಶಃ ಇರಲಾರಳು, ಮಹಿಳೆ ಮತ್ತು ದುಡಿಮೆ ಪರ್ಯಾಯ ಪದಗಳೇನೋ ಅನ್ನುವಷ್ಟರ ಮಟ್ಟಿಗೆ ಹೆಣ್ಣಿನ ಜೀವನದಲ್ಲಿ ಕೆಲಸ ಬೆಸೆದುಕೊಂಡಿದೆ. ಇಂದಿರಾ ಜೈಪ್ರಕಾಶ್‌ರವರು ಕೆಲಸಗಳನ್ನು "ಉತ್ಪಾದನೆ, ಪುನರುತ್ಪಾದನೆ ಮತ್ತು ಸಾಮೂಹಿಕ ಕಾರ್ಯ ಎಂದು ವಿಂಗಡಿಸಲಾಗುತ್ತದೆ" ಎಂದು ಹೇಳಿದ್ದಾರೆ. ಲಿಂಗಾಧಾರಿತ ಶ್ರಮವಿಭಜನೆಯಿಂದಾಗಿ ಸ್ತ್ರೀ–ಪುರುಷರು ಮಾಡುವ ಕೆಲಸಗಳ ವ್ಯಾಖ್ಯೆಯೂ ಬದಲಾಗುತ್ತದೆ. ಉತ್ಪಾದನೆ ಎಂದರೆ ಆದಾಯ ಹುಟ್ಟಿಸುವ ಶ್ರಮಕ್ಕೆ ನಿಗದಿಪಡಿಸಿದ ಪ್ರತಿಫಲ ದೊರೆಯುವಂತಹದೇ ದುಡಿಮೆ. ಆಹಾರ ತಯಾರಿಕೆ, ಸಂಗ್ರಹಣೆ, ಕುಟುಂಬದ ರಕ್ಷಣೆ, ಪಾಲನೆ, ಪೋಷಣೆ ಮುಂತಾದ ಕೆಲಸಗಳ ಜೊತೆಗೆ ಸಂತಾನೋತ್ಪತ್ತಿ ಮತ್ತು ಶಿಶುಪಾಲನೆ ಕೂಡ ಪುನರುತ್ಪಾದನೆಯಲ್ಲಿ ಸೇರಿರುತ್ತದೆ. ಸಮುದಾಯದಲ್ಲಿ ಸಾಮಾಜಿಕ ಕಾರ್ಯಗಳು ಆರ್ಥಿಕವಾಗಿ ಮಹತ್ವಪೂರ್ಣ ವೆನಿಸದಿದ್ದರೂ, ಸಾಮಾಜಿಕ ಮೌಲ್ಯವುಳ್ಳ ಸಮುದಾಯದ ಕೆಲಸ, ಮಹಿಳೆಯರು ಮೂರೂ ರೀತಿಯ ಕಾರ್ಯಕ್ಷೇತ್ರಗಳಲಿಯ್ಲೂ ಭಾಗವಹಿಸುತ್ತಾರೆ.

ಪುರುಷ ಪ್ರಧಾನ ವ್ಯವಸ್ಥೆಯೊಳಗೆ ಉತ್ಪನ್ನದ ವಿಚಾರದಲ್ಲಿ ಎರಡು ಆಶಯಗಳಿವೆ. ಒಂದು ಸಂಸಾರ ನಿರ್ವಹಣೆಯ ಹೊತ್ತ ಪುರುಷ ಸೋಮಾರಿಯಾಗಿ ಕೂರುವಂತಿಲ್ಲ. ಯಾವುದಾದರೂ ಕೆಲಸ ಮಾಡಿ ಸಂಪಾದಿಸಬೇಕು ಎಂಬುದು ಒಂದು ಕಡೆಯಾದರೆ ಇನ್ನೊಂದು ಕಡೆ 'ಉದ್ಯೋಗ'

***Please cite this article as:*** ಲೋಕೇಶ ಟಿ.ಬಿ. (2023). ಇಟ್ಟಿಗೆ ಭಟ್ಟಿಯಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕರ ಸ್ಥಿತಿಗತಿಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(4), 140–144.

ಮಾಡುವ ಅಗತ್ಯ ಮಹಿಳೆಗೆ ಇಲ್ಲ. ಆಕೆ ಗೃಹಕೃತ್ಯ ನಿರ್ವಹಿಸಿದರೆ ಸಾಕು ಎನ್ನುತ್ತಾರೆ. ಹೀಗೆ ಹೇಳುವಲ್ಲಿ ಗೃಹಿಣಿಯನ್ನು ಮನೆಯೊಳಗೆ ಬಂಧಿಸುವ ಪ್ರಯತ್ನದಂತೆ ಕಾಣುತ್ತದೆ.

ಗೃಹಕೃತ್ಯದ ಜೊತೆಗೆ ಕೃಷಿ ಕಾರ್ಯದಲ್ಲೂ ಬೆವರಿಳಿಸಿ ದುಡಿದರೂ ಅದನ್ನು ಉದ್ಯೋಗ (ಕೆಲಸ)ವೇ ಅಲ್ಲ ಎಂಬ ಅವಜ್ಞೆಯು ಇದೆ. ಆಧುನಿಕ ಸಿದ್ಧಾಂತ ಹೋರಾಟಗಳ ಅರಿವಿರದ ಸಾಮಾನ್ಯ ಮಹಿಳೆಯೂ ಇಂದು ತನಗೊಂದು ಉದ್ಯೋಗ ಅನಿವಾರ್ಯವಾಗಿದೆ ಎಂದರಿತು ಅದಕ್ಕಾಗಿ ಹಾತೊರೆಯುತ್ತಿದ್ದಾಳೆ. ತಂದೆ–ತಾಯಿಗಳು, ಸೋದರ ಸೋದರಿಯರು, ಗಂಡು ಮಕ್ಕಳು ಹೀಗೆ ತನ್ನನ್ನು ಆಶ್ರಯಿಸಿದವರಿಗೆ ಪೋಷಕ ಸ್ಥಾನದಲ್ಲಿ ನಿಂತು ದುಡಿದು ಸಾಕಬೇಕಾದ ಜವಾಬ್ದಾರಿ ಹೊತ್ತ ಮಹಿಳೆಯರು ಇಂದು ಹೆಚ್ಚುತ್ತಿದ್ದಾರೆ. ವೃತ್ತಿ ಕಸುಬುಗಳು, ಕೃಷಿ ಜೀವನಗಳು ಅತಂತ್ರವಾಗುತ್ತಿರುವ ಈ ಸಂದರ್ಭದಲ್ಲಿ ಮಹಿಳೆಯರು ಅದರಲ್ಲಿಯೂ ಕಟ್ಟಡ ಕೆಲಸದಲ್ಲಿ ದುಡಿಯುತ್ತಿರುವ ಮಹಿಳೆಯರ ಪರಿಸ್ಥಿತಿ ದುಸ್ಥರವಾಗಿದೆ.

ಇಟ್ಟಿಗೆ ತಯಾರಿ ಕೆಲಸಕ್ಕೆ ಇಟ್ಟಿಗೆ ಭಟ್ಟಿ ಕೆಲಸ ಎನ್ನುತ್ತಾರೆ. ಈ ಇಟ್ಟಿಗೆಗಳನ್ನು ಮನೆ ಕಟ್ಟಲು, ದೊಡ್ಡ ಕಟ್ಟಡ ನಿರ್ಮಾಣ ಮಾಡಲು ಬಳಸುತ್ತಾರೆ. ಇಟ್ಟಿಗೆ ಕೆಲಸ 8 ತಿಂಗಳ ಕೆಲಸವಾಗಿದೆ. ಇದು ಕೂಡಾ ದೀರ್ಘ ಅವಧಿಯ ದುಡಿಮೆಯಾಗಿದೆ, ಇಟ್ಟಂಗಿ ಭಟ್ಟಿ ಮಾಲೀಕರು ಗಾಡಿ ತಂದು ಕರೆದು ಕೊಂಡು ಹೋಗುತ್ತಾರೆ. 1000 ಇಟ್ಟಿಗೆಗೆ ಒಂದು ಬುಟ್ಟಿ ಬೂದಿ, 2 ಚೀಲ ಕಬ್ಬಿನ ಬೂಸಾ, ಮಣ್ಣು ಸೇರಿಸಿ ಇಟ್ಟಿಗೆ ತಯಾರು ಮಾಡುತ್ತಾರೆ. ಎರಡು ಗಂಟೆಯವರೆಗೆ ಕುಂಬಾರ ಮಣ್ಣು ತುಳಿದ ಹಾಗೆ ತುಳಿದು ಹದ ಮಾಡಿಕೊಂಡು ಹೊತ್ತ ಮುಳುಗುವ ತನಕ ಕೆಳಗಡೆ ಕೆಸರು ಇರುವುದರಿಂದ ತುದಿ ಗುಂಡಿಯಲ್ಲೇ ಕುಳಿತು ಇಟ್ಟಿಗೆ ತಯಾರಿಸುತ್ತಾರೆ. ಮಧ್ಯಾಹ್ನ ಒಂದು ಗಂಟೆಯ ನಂತರ ಬಿಸಿಲಲ್ಲಿ ಇಟ್ಟಿಗೆ ಒಣಗಿಸುವುದು. ಎರಡು ದಿನದ ಹಿಂದೆ ಒಣಗಿದ ಇಟ್ಟಿಗೆಯನ್ನು ತಪ್ಪಿ ಒಟ್ಟುವುದು ಮಾಡುತ್ತಾರೆ. ಇಡೀ ದಿನ ಕೆಲಸ ಇರುತ್ತದೆ. ಇಟ್ಟಿಗೆ ಒಂದು ದಿನ ಪೂರ್ತಿ ಒಣಗಿದ ಮೇಲೆ ಕಿಟಕಿ ಹಚ್ಚುತ್ತಾರೆ. ಇಟ್ಟಿಗೆ ಕೆಲಸದಲ್ಲಿ ಜಾಗ ಬದಲಾಯಿಸುವುದಿಲ್ಲ. 8 ತಿಂಗಳು ಒಂದೇ ಕಡೆ ಇದ್ದು ಕೆಲಸ ಮಾಡುತ್ತಾರೆ.

ವಲಸೆ ಕಾರ್ಮಿಕರು ಹರಿಹರ ತಾಲೂಕಿನ ಇಟ್ಟಿಗೆ ಭಟ್ಟಿಗಳಲ್ಲಿ ಕೆಲಸ ನಿರ್ವಹಿಸುತ್ತಾರೆ. ಹರಿಹರದಿಂದ 2 ಕಿ.ಮೀ.ವರೆಗೂ ಎಲ್ಲಿ ನೋಡಿದರೂ ಇಟ್ಟಂಗಿ ಭಟ್ಟಿಗಳೇ ಕಾಣಿಸುತ್ತವೆ. ಮಣ್ಣನ್ನು ಇಟ್ಟಿಗೆ ಅಚ್ಚಿಗೆ ಹಾಕುವುದು, ಒಣಗುಸುವುದು, ಗೂಡು ಕಟ್ಟುವುದು, ಇಟ್ಟಿಗೆಗಳನ್ನು ಸುಡುವುದು ಹೀಗೆ ಇಟ್ಟಿಗೆ ತಯಾರಿಕೆಯ ಪ್ರತಿ ಹಂತದಲ್ಲೂ ಮಹಿಳಾ ಕಾರ್ಮಿಕರ ಪಾಲ್ಗೊಳ್ಳುವಿಕೆಯ ದೃಶ್ಯ ಅಲ್ಲಿ ಸಾಮಾನ್ಯವಾಗಿತ್ತು.

ಈ ಪ್ರದೇಶದಲ್ಲಿ ಸುಮಾರು 2000 ಕಾರ್ಮಿಕರು ಈ ಇಟ್ಟಿಗೆ ಭಟ್ಟಿಗಳಲ್ಲಿ ದುಡಿಯುತ್ತಿದ್ದಾರೆ. ಒಟ್ಟು ಕಾರ್ಮಿಕರಲ್ಲಿ ಮಹಿಳೆಯರ ಪ್ರಮಾಣ ಅಧಿಕವಾಗಿದೆ. ಅದರಲ್ಲೂ ಶಾಲೆಬಿಟ್ಟ ಹೆಣ್ಣುಮಕ್ಕಳ ಪ್ರಮಾಣ ಅಧಿಕವಾಗಿದೆ.

ಒಂದು ದಿನದಲ್ಲಿ ಒಂದು ಕುಟುಂಬ 13–14 ಗಂಟೆಗಳ ಕಾಲ ಕೆಲಸ ಮಾಡಿ 1000 ಇಟ್ಟಿಗೆಗಳನ್ನು ತಯಾರಿಸುತ್ತಾರೆ. ಈ ಕೆಲಸ ಸೆಪ್ಟೆಂಬರ್‌ನಿಂದ ಪ್ರಾರಂಭವಾಗಿ ಜೂನ್ ತಿಂಗಳ ಏಳನೇ ತಾರೀಖಿನವರೆಗೂ ನಡೆಯುತ್ತದೆ. ಈ ಕೆಲಸ ಚಳಿಗಾಲದಲ್ಲಿ ಹೆಚ್ಚಾಗಿ ಇರುತ್ತದೆ. ರಾತ್ರಿ 3 ಗಂಟೆಗೆ ಎದ್ದು ಇಟ್ಟಿಗೆಗಳನ್ನು ಬಡಿಯುತ್ತಾರೆ. ಪುರುಷರು ಮಣ್ಣನ್ನು ಕಲಸಿ ತುಳಿದು ಹದ ಮಾಡಿಕೊಡುತ್ತಾರೆ. ಮಹಿಳೆಯರು ಮತ್ತು ಮಕ್ಕಳು ಕಲಸಿದ ಮಣ್ಣನ್ನು ಇಟ್ಟಿಗೆಯ ಅಚ್ಚಿನೊಳಗೆ ಹಾಕಿ ಬಡಿಯುತ್ತಾರೆ. ಅದನ್ನು ಸ್ವಲ್ಪ ದೂರದಲ್ಲಿ ಸಾಲಾಗಿ ಇಡುತ್ತಾ ಹೋಗುತ್ತಾರೆ. ಈ ಕೆಲಸವನ್ನು ರಾತ್ರಿ ಮಾಡುವ ಬದಲು ಹಗಲು ಹೊತ್ತಲ್ಲಿ ಇಡೀ ದಿನ ಮಾಡಬಹುದಲ್ಲಾ? ಎಂದು ಕೇಳಿದಾಗ, ಬಿಸಿಲಲ್ಲಿ

ತಯಾರು ಮಾಡಿದ ಇಟ್ಟಿಗೆ ಸೀಳುತ್ತವೆ. ಹಾಗಾಗಿ ರಾತ್ರಿ ಥಂಡಿಯಲ್ಲಿಯೇ ಹೆಚ್ಚಾಗಿ ಬಡಿಯುತ್ತೇವೆ. ಮಾಲೀಕರು ಸೀಳಿದ ಮತ್ತು ಒಡೆದ ಇಟ್ಟಿಗೆಗಳಿಗೆ ಬೆಲೆ ಹಿಡಿಯುವುದಿಲ್ಲ. ಇಷ್ಟು ದೂರು ಬಂದಿವಿ ಅಂತ ರಾತ್ರಿ– ಹಗಲು ಕೂಡಿನೇ ಕುಟುಂಬದವರೆಲ್ಲ ಸೇರಿ ಕೆಲಸ ಮಾಡಿದಾಗ ಮಾತ್ರ 400–500 ರೂಪಾಯಿ ಕೂಲಿ ಸಿಗುತ್ತದೆ' ಎಂದರು. ಇದೇ ರೀತಿಯ ಇಟ್ಟಂಗಿ ಭಟ್ಟಿಗಳಿರುವ ಹುಬ್ಬಳ್ಳಿ, ವಿಜಯಪುರ, ಬಾಯಪಾಸ, ಇಂಡಿ, ಧೂಳಖೇಡ, ಸತಾರ, ಧಾರವಾಡ, ಇಸ್ಲಾಂಪುರದಲ್ಲಿ ಕೆಲಸ ಮಾಡುತ್ತಿದ್ದಾರೆ.

**ಇಟ್ಟಂಗಿ ಭಟ್ಟಿ ಮಾಲೀಕ**

ಇಟ್ಟಿಗೆ ಭಟ್ಟಿ ಮಾಲೀಕನಿಗೂ ಕಾರ್ಮಿಕರಿಗೂ ನೇರ ಸಂಬಂಧವಿದೆ. ಮಾಲೀಕರೂ ಇವರ ಊರುಗಳಿಗೆ ಬಂದು ಮುಂಗಡ ಹಣ ಕೊಟ್ಟು ಆಳುಗಳನ್ನು ಒಗ್ಗೂಡಿಸಿ ಕೆಲಸಕ್ಕೆ ಬರಲು ಹೇಳುತ್ತಾರೆ. ಮಾಲೀಕರ ಇಟ್ಟಿಗೆ ಭಟ್ಟಿಗೆ ಬರಲು ವಾಹನ ಕಳುಹಿಸುವುದು ಕಡಿಮೆ. ಇಲ್ಲಿ ಕೂಲಿ ಕಾರ್ಮಿಕರೇ ನೇರವಾಗಿ ಸಾರಿಗೆ ವೆಚ್ಚ ಹಾಕಿಕೊಂಡು ಹೋಗುತ್ತಾರೆ. ಮಾಲೀಕ ಒಂದು ಕುಟುಂಬ ಅಂತ ನೇಮಕ ಮಾಡಿಕೊಂಡು 50,000 ರಿಂದ ರೂ. 1,00,000 ರೂಗಳವರೆಗೆ ಮುಂಗಡ ಹಣ ಕೊಡುತ್ತಾರೆ. ಇಲ್ಲಿ ಸಣ್ಣಮಕ್ಕಳು, ವಯಸ್ಸಾದವರು ಎಲ್ಲರೂ ಕೆಲಸ ಮಾಡುತ್ತಾರೆ. ವಲಸೆ ಹೋಗಿ ಸೀಜನ್ ಮುಗಿಸಿ ಹಿಂದಿರುಗಿ ಬರುವವರೆಗೂ ಕಾರ್ಮಿಕರ ಜವಾಬ್ದಾರಿ ಮಾಲೀಕನ ಮೇಲೆ ಇರುತ್ತದೆ.

**ವಲಸೆ ಕೂಲಿ ಕಾರ್ಮಿಕರು**

ಇಟ್ಟಿಗೆ ಕಾರ್ಖಾನೆ ಮಾಲೀಕರು ಇಟ್ಟಿಗೆ ಕಾರ್ಮಿಕರನ್ನು ಹೊರಗಡೆಯಿಂದ ಕರೆತರುತ್ತಾರೆ. ಇವರು ಕಾರ್ಮಿಕರಿಗೆ ಮೊದಲೇ 50,000 ರೂ ಮುಂಗಡ ಹಣವನ್ನು ನೀಡಿರುತ್ತಾರೆ. ಆರು ತಿಂಗಳಲ್ಲಿ ಮುಂಗಡ ಹಣಕ್ಕೆ ದುಡಿಯುತ್ತಾರೆ. ಒಂದು ವೇಳೆ ಈ ಹಣ ಮುಗಿಯದಿದ್ದರೆ ಉಳಿದ ಹಣಕ್ಕೆ ಮರುವರ್ಷ ದುಡಿಯ ಬೇಕಾಗುತ್ತದೆ. ದುಡಿಯಲು ಸಾಧ್ಯವಾಗದಿದ್ದರೆ ಹಣವನ್ನು ಹಿಂತಿರುಗಿಸಿ ಕೊಡಬೇಕಾಗುತ್ತದೆ.

**ಕೂಲಿ**

ಸಾವಿರ ಇಟ್ಟಿಗೆಗೆ 500 ರೂಪಾಯಿ ಇದೆ. ದಾವಣಗೆರೆ ಜಿಲ್ಲೆ ಹರಿಹರ ತಾಲೂಕಿನ 40 ವರ್ಷ ವಯಸ್ಸಿನ ಶ್ರೀದೇವಿ ಅಗರಖೇಡ ಅವರು 1998ರಿಂದ ಇಟ್ಟಿಗೆ ಕೆಲಸ ಮಾಡುತ್ತಿದ್ದಾರೆ. ಆಗ 1000 ಇಟ್ಟಿಗೆ ತಯಾರು ಮಾಡಿದರೆ 55 ರೂಪಾಯಿ ಇತ್ತು, 55 ರೂಪಾಯಿ ದರದಲ್ಲಿ 6 ವರ್ಷ ಇಟ್ಟಂಗಿ ಕೆಲಸ ಮಾಡಿದ್ದೇನೆ. ಸಾಂಗ್ಲಿಯಲ್ಲಿ 1000 ಇಟ್ಟಿಗೆಗೆ 250 ರೂಪಾಯಿ ಇತ್ತು. ಅಲ್ಲಿ 3 ವರ್ಷ ಕೆಲಸ ಮಾಡೀವಿ, ಬಳ್ಳಾರಿಯಲ್ಲಿ 1000 ಇಟ್ಟಿಗೆಗೆ 250 ರೂಪಾಯಿ ಇತ್ತು, ಅಲ್ಲಿ 2 ವರ್ಷ ಕೆಲಸ ಮಾಡೀನಿ, ಲಾಥರ್‌ನಲ್ಲಿ 1000 ಇಟ್ಟಿಗೆಗೆ ರೂ. 300 ಇತ್ತು. ಅಲ್ಲಿ ಒಂದು ವರ್ಷ ಕೆಲಸ ಮಾಡಿದ್ದೇನೆ. ಈಗ ಹುಬ್ಬಳ್ಳಿಯಲ್ಲಿ ಮಾಡುತ್ತಿದ್ದೇವೆ. 1000 ಇಟ್ಟಿಗೆಗೆ 500 ರೂಪಾಯಿ ಇದೆ. ರಾತ್ರಿ–ಹಗಲು ಕೂಡಿ ಕೆಲಸ ಮಾಡಿ ಹಣ ಮುಟ್ಟಿಸಿದ್ದೇನೆ ಎಂದು ಹೇಳುತ್ತಾರೆ.

**ಕೆಲಸದ ಒತ್ತಡ**

ಇಟ್ಟಿಗೆ ಭಟ್ಟಿ ಕೆಲಸದಲ್ಲಿ ಒತ್ತಡ ಹೆಚ್ಚಿರುತ್ತದೆ. ಕೆಲವು ಸಂದರ್ಭದಲ್ಲಿ ಮಾಲೀಕರು ತುಂಬಾ ಹೊಲಸಾದ ಪದಗಳಿಂದ ಕಾರ್ಮಿಕರನ್ನು ನಿಂದಿಸುತ್ತಾರೆ. ಇದರ ನಡುವೆಯೂ ಕಾರ್ಮಿಕರು ಅವಿರತರಾಗಿ ದುಡಿಯುತ್ತಾರೆ. ಇಟ್ಟಿಗೆ ತಯಾರು ಮಾಡುವಾಗ ಕೆಳಗಡೆ ಕೆಸರು ಇರುತ್ತದೆ. ತುದಿಕಾಲಲ್ಲಿ ಕುಳಿತು ಕೆಲಸ ಮಾಡುತ್ತಾರೆ. ಹೆಚ್ಚು ಹೊತ್ತು ಕುಳಿತರೆ ಕಾಲುನೋವು ಬರುತ್ತದೆ. ಇಟ್ಟಿಗೆ ಭಟ್ಟಿಯೊಳಗೆ ಇಟ್ಟಂಗಿಯ ಸಣ್ಣ ಕಚ್ಚಾಮನೆ ಇದ್ದರೂ ಅದರಲ್ಲಿ ವಿದ್ಯುತ್ ಆಗಲಿ, ಸ್ನಾನಗೃಹ, ಶೌಚಾಲಯವಾಗಲಿ ಇರುವುದಿಲ್ಲ.

**ಕಾರ್ಮಿಕರು ಎದುರಿಸುವ ಸಮಸ್ಯೆಗಳು**

ಇಟ್ಟಿಗೆ ಕೆಲಸದಲ್ಲಿ ಒಂದೇ ಜಾಗದಲ್ಲಿ ಕುಳಿತು ಕೆಸರು ಬಡಿದು ಸೊಂಟ, ಕೈ ಹಿಡಿದುಕೊಂಡು ನೋವಾಗುತ್ತದೆ. ಕಾಲು ಹರಿಯುತ್ತವೆ. ಕೆಸರು ತುಳಿದು ಹೈರಾಣ ಆಗುತ್ತದೆ. ಕೆಳಗಡೆ ಕೆಸರು ಇರುವುದರಿಂದ ತುದಿಗುಂಡಿಯಲ್ಲೇ ಕುಳಿತು ಕೆಲಸ ಮಾಡಿ ಕಾಲು ಜೋಮು ಹಿಡಿಯುತ್ತದೆ. ಇಟ್ಟಿಗೆ ಬಡಿದು–ಬಡಿದು ರೊಟ್ಟಿ ಸಹಿತ ಮಾಡಲು ಸಾಧ್ಯವಾಗುವುದಿಲ್ಲ. ಕೆಸರಲ್ಲಿನ ಕಲ್ಲು, ಗಾಜಿನ ತುಂಡುಗಳು ಕೈಗೆ ತರಚಿ ನೋವಾಗುತ್ತದೆ. ತಲೆಗೆ ನೋವಾಗುತ್ತದೆ. ಮಣ್ಣು, ಬೂದಿ ಹೊಟ್ಟೆಯೊಳಗೆ ಹೋಗಿ ತೊಂದರೆ ಆಗುತ್ತದೆ. ವಲಸೆ ಹೋದಲ್ಲಿ ಭಾಷೆಯ ತೊಂದರೆಯಾಗುತ್ತದೆ.

ಇಟ್ಟಿಗೆ ಖರೀದಿಸಲು ಗಿರಾಕಿ ಆರ್ಡರ್ ಬಂದ್ರೆ 2000 ಇಟ್ಟಿಗೆಗಳನ್ನು ಏರಿಸಿ, ಇಳಿಸಿ ಬರುತ್ತಾರೆ. ಆಗ ಹೆಚ್ಚಿನ ಆದಾಯ ಕೊಡುತ್ತಾರೆ. ತುಂಡಾದ ಇಟ್ಟಿಗೆಗಳನ್ನು ತುಂಬಿ ಡಿಗ್ಗಿ ಹಾಕುವುದು. 160 ರೂಪಾಯಿ ಕೊಡುತ್ತಾರೆ. ಮೊದಲು 15 ರೂಪಾಯಿ ಇತ್ತೆಂದು ವಲಸೆ ಮಹಿಳೆಯರು ಪ್ರತಿಕ್ರಿಯಿಸಿದ್ದಾರೆ. ಇಟ್ಟಿಗೆ ಕೆಲಸದಲ್ಲಿ ಇಟ್ಟಿಗೆ ಕೊಂಡುಕೊಳ್ಳುವವರು ಬಂದಾಗ ಅವರು ಖರೀದಿ ಮಾಡಿದ ಇಟ್ಟಿಗೆಗಳನ್ನು ಇಬ್ಬರು ಅಥವಾ ಜಾಸ್ತಿ ಇದ್ದರೆ 4 ಜನ ಮಹಿಳೆಯರು ಸೇರಿ ಗಾಡಿಗಳಲ್ಲಿ ತುಂಬುತ್ತಾರೆ. 50–100 ರೂಪಾಯಿ ಸಿಕ್ಕಾಗ ಎಲ್ಲರು ಹಂಚಿಕೊಳ್ಳುತ್ತಾರೆ.

ಇಟ್ಟಿಗೆ ಭಟ್ಟಿಯ ಕೆಲಸದಲ್ಲಿ 8 ತಿಂಗಳು ರಜೆಯೇ ಇರುವುದಿಲ್ಲ. ಇದು ಮೈಮೇಲಿನ ಕೆಲಸ ಎಷ್ಟು ಇಟ್ಟಿಗೆ ತಯಾರಿ ಮಾಡುತ್ತಾರೆ ಅಷ್ಟು ಬೇಗ ಹಣ ಮುಟ್ಟುತ್ತವೆ. ಬೇಗ ಹಣ ಮುಟ್ಟಲಿ ಅಂತ ಸತತ ದುಡಿಯುತ್ತಾರೆ. ಕೆಲವು ವೇಳೆ ಮಾಲೀಕರ ಅನುಮತಿ ಪಡೆದು ರಜೆ ಪಡೆಯುತ್ತಾರೆ. ಕೆಲವರು ಅಮವಾಸ್ಯೆಗೊಮ್ಮೆ ರಜೆ ತಗೆದುಕೊಳ್ಳುತ್ತಾರೆ. ಸಂತೆಗೆ ಹೋಗಿ ದಿನಸಿ ತಗೊಂಡು ಬರಲು ಮಾಲೀಕರ ಹತ್ತಿರ ಹಣ ತೆಗೆದುಕೊಳ್ಳುತ್ತಾರೆ. ಮಾಲೀಕರು ಇದನ್ನು ಲೆಕ್ಕದ ಪುಸ್ತಕದಲ್ಲಿ ಬರೆದು ಇಡುತ್ತಾರೆ. ಕೊನೆಯಲ್ಲಿ ಎಷ್ಟು ಇಟ್ಟಿಗೆಗಳು ಆಗಿವೆ ಅಂತ ಲೆಕ್ಕ ಹಾಕಿ, ಮಧ್ಯೆ ಸಂತೆಗೆ ತೆಗೆದುಕೊಂಡ ಹಣವನ್ನು ಕಳೆದು ಉಳಿದ ಹಣವನ್ನು ಕೊಡುತ್ತಾರೆ.

ಇಟ್ಟಿಗೆ ಕೆಲಸದಲ್ಲಿ ಯಾವುದೇ ಭದ್ರತೆ ಇರುವುದಿಲ್ಲ. ನಿಶ್ಚಿತ ವೇತನ, ಸಂದರ್ಭನುಸಾರವಾಗಿ ಭತ್ಯೆ, ವಿರಾಮ ವೇತನ, ಕೆಲಸದಲ್ಲಿ ಎಷ್ಟೆ ಪರಿಪೂರ್ಣತೆ ಇದ್ದರೂ ಬಡ್ತಿ ಸಿಗುವುದಿಲ್ಲ. ಇಟ್ಟಿಗೆ ಕೆಲಸ ಮಾಡುವ ವಲಸೆ ಕಾರ್ಮಿಕರಿಗೆ ಸಾಮಾಜಿಕ ಭದ್ರತಾ ಸೌಲಭ್ಯಗಳಾದ ಅಪಘಾತ ವಿಮೆ, ವೈದ್ಯಕೀಯ ಸೇವೆಗಳ ಯಾವ ಅನುಕೂಲಗಳೂ ದೊರಕುವುದಿಲ್ಲ. ಕೈಗಾರೀಕರಣ, ನಗರೀಕರಣ, ಬಡತನ, ಬರಗಾಲ ಮುಂತಾದ ಕಾರಣಗಳಿಂದ ನಗರದ ಕಡೆ ವಲಸೆ ಬರುವ ಅನಕ್ಷರಸ್ಥ ಕಾರ್ಮಿಕರು ತಮ್ಮ ಜೀವನಕ್ಕೆ ಅವಲಂಬಿಸುತ್ತಿರುವುದು ಕಟ್ಟಡ ನಿರ್ಮಾಣ ಕೆಲಸವನ್ನು ಇಟ್ಟಗಿ ಭಟ್ಟಿ ಗುತ್ತಿಗೆದಾರರು ಮಾಲೀಕರು, ಮೇಸ್ತ್ರಿಗಳಿಂದ ಇಟ್ಟಗಿ ಭಟ್ಟಿ ಕಾರ್ಮಿಕರ ಶೋಷಣೆ ಮುಂದುವರಿದಿದೆ. ಕಡಿಮೆ ಕೂಲಿಗೆ ಹೆಚ್ಚು ದುಡಿಮೆ ದುಡಿಯುವ ಸ್ಥಳದಲ್ಲಿ ಮೂಲಭೂತ ಅವಶ್ಯಕತೆಗಳ ಕೊರತೆ, ಕಾನೂನಿನ ಪಾಲನೆ ಇಲ್ಲದಿರುವುದು ಇವೆಲ್ಲವು ಮಹಿಳಾ ಕಾರ್ಮಿಕರ ಬದುಕನ್ನು ಮತ್ತಷ್ಟು ಜಟಿಲಗೊಳಿಸಿವೆ.

ವಲಸೆ ಬಂದಿರುವ ಈ ಕಾರ್ಮಿಕರು ಪಾಳುಬಿದ್ದ ಜಾಗಗಳಲ್ಲಿ, ಕೊಳಚೆ ಪ್ರದೇಶಗಳಲ್ಲಿ ಜೋಪಡಿಗಳನ್ನು ನಿರ್ಮಾಣ ಮಾಡಿಕೊಂಡು ವಾಸಿಸುತ್ತಾರೆ. ಮಹಿಳಾ ಕಾರ್ಮಿಕರು ಶೌಚಾಲಯದ ಬಳಕೆಗೆ ಅವಕಾಶವಿಲ್ಲದೆ ತೊಂದರೆ ಅನುಭವಿಸಬೇಕಾಗಿದೆ. ಮಹಿಳೆಯನ್ನು 'ಮಾತೃದೇವೋಭವ' ಎಂಬ ನಾಡಿನಲ್ಲಿ ಸ್ತ್ರೀಯರನ್ನು ಸಂಕೀರ್ಣಗೊಳಿಸುವ ಸಂಸ್ಕೃತಿ ಅವಳ ಅಂತಃಸತ್ವವನ್ನು ಹಿಂಡುತ್ತಿದೆ. ಜಾಗತೀಕರಣದಿಂದ ಮಾರುಕಟ್ಟೆ ಅವಳನ್ನು ಕೇವಲ ಒಂದು ವಸ್ತುವಾಗಿಯೂ ಅವಳ ದೇಹವನ್ನು ಮಾರಾಟದ ಸರಕಾಗಿಯೂ ಪರಿಗಣಿಸುತ್ತಿವೆ. ಜಾಗತೀಕರಣದ ಪ್ರತಿಯೊಂದು ವಸ್ತು ವಿಷಯವೂ ಮಾರುಕಟ್ಟೆಯ ಮೂಲಕವೇ ತನ್ನ ಅಧಿಕೃತತೆಯನ್ನು

ಪಡೆಯಬೇಕಾದ ಸ್ಥಿತಿಯಿದೆ. ಇಲ್ಲಿ ಮಹಿಳೆಯು ಸಹ ಗುರುತಿಸಲ್ಪಡುತ್ತಿರುವುದು ಕೇವಲ ಸರಕಾಗಿ ಮಾತ್ರ ಎಂಬ ವಿಷಯ ಇಲ್ಲಿ ಗಮನಾರ್ಹವಾಗಿದೆ.

ಒಟ್ಟಿನಲ್ಲಿ ಹೇಳುವುದಾದರೆ ಅಸಂಘಟಿತ ವಲಯದಲ್ಲಿ ದುಡಿಯುವ ಮಹಿಳಾ ಕಾರ್ಮಿಕರು ಅನೌಪಚಾರಿಕ ಕ್ಷೇತ್ರದಲ್ಲಿ ಮುಂದುವರೆಯುವಂತೆ ಕೆಲವೊಂದು ಶಕ್ತಿಗಳು ಕೆಲಸ ಮಾಡಿವೆ. ಮಹಿಳಾ ಕಾರ್ಮಿಕರಿಗೆ ಸಿಗುವ ಸೌಲಭ್ಯಗಳು ಸಿಗಲೇಬೇಕು. ಈ ನಿಟ್ಟಿನಲ್ಲಿ ನಾಗರಿಕ ಸಮಾಜವು ಇವರಲ್ಲಿ ಜಾಗೃತಿ ಮೂಡಿಸಿ ಅನೌಪಚಾರಿಕ ಕ್ಷೇತ್ರಗಳನ್ನು ಸಂಘಟಿಸಲ್ಪಟ್ಟಾಗ ಮಾತ್ರ ಮಹಿಳಾ ಕಾರ್ಮಿಕರಿಗೆ ಸಿಗುವ ಮಾನ್ಯತೆ ಸಿಗುತ್ತದೆ. ಇದರಿಂದ ದೇಶದ ಅರ್ಧದಷ್ಟಿರುವ ಮಹಿಳಾ ಕಾರ್ಮಿಕರು ಹೊಸ ಆಯಾಮಗಳನ್ನು ಪಡೆದುಕೊಳ್ಳುತ್ತಾರೆ. ಈ ನಿಟ್ಟಿನಲ್ಲಿ ನಾಗರಿಕ ಸಮಾಜ ಸರ್ಕಾರ ಹಾಗೂ ಕಾರ್ಮಿಕರು ಒಕ್ಕೂರಲಿನಿಂದ ಪ್ರಾಮಾಣಿಕ ಹೋರಾಟ ಮಾಡಿ ಮಹಿಳಾ ಕಾರ್ಮಿಕರಿಗೆ ಸಿಗಬೇಕಾದ ಸೌಲಭ್ಯಗಳ ತಲುಪಿಸುವ ಮೂಲಕ ಅವರ ಸಬಲೀಕರಣಕ್ಕೆ ಶ್ರಮಿಸಬೇಕಾದದ್ದು ಅತ್ಯವಶ್ಯಕವಾಗಿದೆ.

**ಪರಾಮರ್ಶನ ಗ್ರಂಥಗಳು**


- ಆಂಜನಪ್ಪ ಬಿ.ಹೆಚ್. (2009). *ಮಹಿಳೆ ಮತ್ತು ದುಡಿಮೆ.* ದೇಸಿ ಮಸ್ತಕ ಪ್ರಕಾಶನ.
- ಚೇತನ್ ಕಲ್‌ಬಾಗ್. (1991). *ವುಮೆನ್ ಅಂಡ್ ಡೆವಲಪ್‌ಮೆಂಟ್.* ಡಿಸ್ಕವರಿ ಪಬ್ಲಿಷಿಂಗ್ ಹೌಸ್.
- ಹೇಮಲತಾ ಹೆಚ್.ಎಂ. (2002). *ಮಹಿಳಾ ಅಧ್ಯಯನ ಭಾಗ–3,* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ.
- ಮುನ್ನಿರುದ್ದಿನ್ ಖರೇಸಿ. (2003). *ಸೋಷಿಯಲ್ ಸ್ಟೇಟಸ್ ಆಫ್ ಇಂಡಿಯನ್ ವುಮೆನ್.* ನ್ಯೂಡೆಲಿ ಪಬ್ಲಿಕೇಷನ್.
- ಶ್ರೀಮತಿ, ಎಚ್.ಎಸ್. (ಸಂ.) (2007). ಮಹಿಳೆ ದುಡಿಮೆ ಮತ್ತು ಬಿಡುವು. *ಮಹಿಳಾ ಅಧ್ಯಯನ ಕೇಂದ್ರ,* ಹಂಪಿ ವಿಶ್ವವಿದ್ಯಾಲಯ.